<u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ</u>

**ಫೌಜದಾರಿ ಪ್ರಕರಣ ಸಂಖ್ಯೆ:640/2016**

**ಸರಕಾರದ ಪರವಾಗಿ ಃ ಪೋಲೀಸ್ ಠಾಣೆ ಸೇಡಂ**

//ವಿರುದ್ಧ//

**ಆರೋಪಿ :** 1 ರಾಜಪ್ಪ ತಂದೆ ಸಾಬಣ್ಣ ರಾಕನೋರ
ವಃ 32 ವರ್ಷ, ಉಃ ಒಕ್ಕಲುತನ

2. ಸಾಬಣ್ಣ ತಂದೆ ಬಸಪ್ಪ ರಾಕನೋರ
ವಃ 61 ವರ್ಷ, ಉಃ ಕೂಲಿ ಕೆಲಸ

3. ಬಸವರಾಜ ತಂದೆ ಸಾಬಣ್ಣ ರಾಕನೋರ
ವಃ 20 ವರ್ಷ, ಉಃ ಕುರಿ ಕಾಯುವುದು

4. ಮಲ್ಲಮ್ಮ ಗಂಡ ಸಾಬಣ್ಣ ರಾಕನೋರ
ವಃ 45 ವರ್ಷ, ಉಃ ಕೂಲಿ ಕೆಲಸ

5. ಗುಂಡಮ್ಮ ತಂದೆ ಬಸಪ್ಪ ರಾಕನೋರ
ವಃ 65 ವರ್ಷ, ಉಃ ಕೂಲಿ ಕೆಲಸ
ಎಲ್ಲರೂ ಸಾಃ ತೆಲ್ಕೂರ, ತಾಃ ಸೇಡಂ **(Abated)**

**ದಂಡ ಪ್ರಕ್ರಿಯಾ ಸಂಹಿತೆ ಕಲಂ 313ರ ಅನ್ವಯ ಆರೋಪಿಯ ಹೇಳಿಕೆ**

ಪ್ರಶ್ನೆ 1) ಅಭಿಯೋಜನೆ ಪರ ವಿಚಾರಣೆ ಮಾಡಿದ ಸಾಕ್ಷಿಗಳನ್ನು ಮನಪೂರ್ವಕವಾಗಿ ಕೇಳಿದ್ದಿರಾ ?

ಉಃ ಕೇಳಿರುತ್ತೇನೆ.

ಪ್ರಶ್ನೆ 2) ಚಾಸಾ.1/ಪ್ರಾಸಾ.1 ಯಲ್ಲಾಲಿಂಗ ತಂದೆ ಮಲ್ಲಪ್ಪ, ತಮ್ಮ ಸಾಕ್ಷ್ಯದಲ್ಲಿ ದಿ. 06.11.2025ರಂದು, ಚಾ ಸಾ 4 ಮತ್ತು 6 ಅವರ ತಾಯಿ ಮತ್ತು ತಂದೆ, ಚಾ ಸಾ 5 ಅವರ ಊರಿನವರು, ಚಾ ಸಾ 7 ಅವರ ತಮ್ಮ, ಆರೋಪಿತರು ಪರಿಚಯ, ದಿ.09-03-2016 ರಂದು ಬೆಳಿಗ್ಗೆ 06-00 ಗಂಟೆ ಸುಮಾರಿಗೆ ಅವರು ಮತ್ತು ಚಾ ಸಾ 4, 6 ಮತ್ತು 7 ಅವರ ಮನೆಯಲ್ಲಿ ಕುಳಿತುಕೊಂಡಾಗ ಆರೋಪಿತರೆಲ್ಲಾರೂ ಬಂದು ಅವರಿಗೆ ರಂಡಿ ಮಗನೆ, ಸೂಳೆ ಮಗನೆ ಅಂತಾ ಅವಾಚ್ಯವಾಗಿ ಬೈಯುತ್ತಿದ್ದರು, ಆಗ ಇವರು ಸುಮ್ಮ ಸುಮನೆ ಅವರಿಗೆ ಯಾಕೆ ಬೈಯುತಿದ್ದೀಯಾ ಅಂತಾ ಕೇಳಿದಕ್ಕೆ ಆಗ 2 ನೇ ಆರೋಪಿತನು ಅವರಿಗೆ ಎದುರು ಮಾತನಾಡುತ್ತೀ ಸೂಳೆ ಮಗನೆ ನಿನಗೆ ಸಾಯಿಸುಬಿಡುತ್ತೇನೆ ಎಂದು ಹೇಳಿದನು, ಅದೇ ರೀತಿ ಅಲ್ಲೆ ಬಿದ್ದ ಒಂದು ಕಟಿಗೆಯನ್ನು ತೆಗೆದುಕೊಂಡು ಅವನ ತಲೆಗೆ ಹೊಡೆದನು, ಆಗ 1 ನೇ ಆರೋಪಿತನು ಕಲ್ಲಿನಿಂದ ಅವನ ಬೆನ್ನಿನಲ್ಲಿ ಮತ್ತು ತಲೆಗೆ ಹೊಡೆದಿರುತ್ತಾನೆ, ಅಷ್ಟರಲ್ಲಿ 3 ನೇ ಆರೋಪಿತನು ಬಂದು ಕೈಯಿಂದ ಮುಖಕ್ಕೆ ಹೊಡೆದಿರುತ್ತಾನೆ, ಅದೇ ರೀತಿ ಚಾ ಸಾ 4 ಮತ್ತು 5 ರವರು ಅವಾಚ್ಯ ಶಬ್ದಗಳಿಂದ ಬೈಯುತ್ತಿದ್ದರು ಮತ್ತು ಈ ಸೂಳೆ ಮಕ್ಕಳದು ಬಹಳಾ ಆಗಿದೆ

ಸಾಯಿಸಿ ಬಿಡಿರಿ ಅಂತಾ ಹೇಳಿದರು, ಆಗ ಚಾ ಸಾ 6 ಮತ್ತು 7 ರವರು ಮನೆಯಿಂದ ಹೊರಗಡೆ ಬಂದಿದ್ದರು, ಆಗ 3 ನೇ ಆರೋಪಿತನು ಚಾ ಸಾ 7 ರವರಿಗೆ ಕೈಯಿಂದ ಹೊಡೆದಿದ್ದನು, ಅದೇ ರೀತಿ 1 ನೇ ಆರೋಪಿತನು ಚಾ ಸಾ 4 ರವರಿಗೆ ಕಲ್ಲಿನಿಂದ ಹೊಡೆದನು, ಆಗ 1 ನೇ ಆರೋಪಿತನು ಅವರ ತಾಯಿಯ ಸೀರೆ ಮತ್ತು ಕುಪ್ಪಸವನ್ನು ಹಿಡಿದುಕೊಂಡು ಎಳೆದಾಡಿದನು, ಜಗಳ ಆದಾಗ ಅವರ ತಲೆಯಿಂದ ರಕ್ತ ಸೋರುತ್ತಿರುವುದರಿಂದ ಅವರ ಮೈಯಲ್ಲಿ ಎಲ್ಲಾ ರಕ್ತ ಆಗಿತ್ತು, ಸಾಕ್ಷಿಯು ರಕ್ತ ಬಿದ್ದಿದ್ದ ಅಂಗಿಯನ್ನು ಮತ್ತು ಪ್ಯಾಂಟ್‌ನ್ನು ತೋರಿಸಿರುತ್ತಾರೆ, ಆಗ ಚಾ ಸಾ 5 ರವರು ಬಂದು ಜಗಳ ಬಿಡಿಸಿದರು, ನಂತರ ಇವರು ಸೇಡಂ ಪೊಲೀಸ್ ಠಾಣೆಗೆ ಬಂದಿದ್ದರು, ಆಗ ಪೋಲೀಸರು ಇವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿ ಆರೋಪಿತರ ವಿರುದ್ದ ಪ್ರಕರಣವನ್ನು ದಾಖಲಿಸಿಕೊಂಡಿರುತ್ತಾರೆ, ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಸದರಿ ದಾಖಲಾತಿಯು ದೂರಾಗಿದ್ದು ಸಾಕ್ಷಿಯು ಅದನ್ನು ನೋಡಿ ಗುರುತಿಸಿರುತ್ತಾರೆ, ಅದೇ ರೀತಿ ಸಾಕ್ಷಿಗೆ ಒಂದು ಕಲ್ಲು ಮತ್ತು ಬಡಿಗೆಯನ್ನು ತೋರಿಸಲಾಗಿ ಸಾಕ್ಷಿಯು ಅದನ್ನು ನೋಡಿ ಇದರಿಂದ ಅವರಿಗೆ ಹೊಡೆದಿರುತ್ತಾರೆ ಎಂದು ಒಪ್ಪಿ ಕೊಂಡಿರುತ್ತಾರೆ, ಎಂದು ನುಡಿಯತ್ತಾರೆ, ಅದಕ್ಕೆ ನೀನೇನು ಹೇಳುತ್ತೀ?
ಉಃ ಸುಳ್ಳು.

ಪ್ರಶ್ನೆ 3) ಚಾಸಾ.5/ಪ್ರಾಸಾ.2 ಅಲ್ಲಾವುದ್ದೀನ್ ತಂದೆ ಬಂದೇಲಿ ಖಾನ್, ಇವರು ತಮ್ಮ ಸಾಕ್ಷದಲ್ಲಿ ದಿ.06.11.2025 ರಂದು, ಚಾ ಸಾ 1, 4, 6 ಮತ್ತು 7 ಗೊತ್ತು, ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿತರು ಪರಿಚಯ, ಸುಮಾರು 09 ವರ್ಷಗಳ ಹಿಂದೆ ಬೆಳಿಗ್ಗೆ 06-00 ಗಂಟೆಗೆ ಚಾ ಸಾ 1 ಮತ್ತು ಆರೋಪಿತರ ನಡುವೆ ಜಗಳ ಆಗಿತ್ತು, ಇವರು ಚಾ ಸಾ 1 ರವರ ಮನೆಯ ಪಕ್ಕದಲ್ಲಿದ ಬೈಹಿರ್ ದೆಸೆಗೆ ಹೋಗುತ್ತಿದ್ದಾಗ ಆರೋಪಿತರು ಮತ್ತು ಚಾ ಸಾ 1 ರವರು ಜಗಳ ಆಡುತ್ತಿದ್ದರು, ಆಗ 2 ನೇ ಆರೋಪಿತನು ಬಡಿಗೆಯಿಂದ ಚಾ ಸಾ 1 ರವರಿಗೆ ಹೋಡೆಯುತ್ತಿದ್ದನು, ಅದೇ ರೀತಿ 3 ನೇ ಆರೋಪಿತನು ಕಲ್ಲಿನಿಂದ ಚಾ ಸಾ 1 ರವರ ತಲೆಗೆ ಹೋಡೆದಿರುತ್ತಾರೆ, ಆಗ ಇವರು ಜಗಳ ಬಿಡಿಸಿಕೊಂಡು ಮನೆಗೆ ಹೋಗಿರುತ್ತಾರೆ, ನಂತರ ಚಾ ಸಾ 1 ರವರು ಆಸ್ಪತ್ರೆಗೆ ಹೋದರು, ಈ ಬಗ್ಗೆ ಪೋಲೀಸರಿಗೆ ಹೇಳಿಕೆ ನೀಡಿರುತ್ತಾರೆ, ಎಂದು ನುಡಿಯುತ್ತಾರೆ, ಅದಕ್ಕೆ ನೀನೇನು ಹೇಳುತ್ತೀ?
ಉಃ ಸುಳ್ಳು.

ಪ್ರಶ್ನೆ 4) ಚಾಸಾ.2/ಪ್ರಾಸಾ.3 ಕಲ್ಲಪ್ಪ ತಂದೆ ಮಲ್ಲೇಶಪ್ಪ, ದಿ. 06.11.2025 ರಂದು ತಮ್ಮ ಸಾಕ್ಷ್ಯದಲ್ಲಿ, ಚಾ ಸಾ 1, 3, 4, 6 ಮತ್ತು 7 ಗೊತ್ತು, ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿತರು ಪರಿಚಯ, ಸಾಕ್ಷಿಯು ಗುನ್ನೆ ಸ್ಥಳದ ಪಂಚನಾಮೆಯನ್ನು ನೋಡಿ ಗುರುತಿಸಿರುತ್ತಾರೆ, ಇವರು ಸದರಿ ದಾಖಲಾತಿಗೆ ಸುಮಾರು 8 ರಿಂದ 9 ವರ್ಷಗಳ ಹಿಂದೆ ಹೆಬೆಟ್ಟಿನ ಗುರುತು ಹಾಕಿರುತ್ತಾರೆ, ಆಗ ಪೋಲೀಸರು ಬಂದು ಪಂಚನಾಮೆ ಮಾಡಿ ಒಂದು ಬಡಿಗೆ ಮತ್ತು ಒಂದು ಕಲ್ಲನ್ನು ವಶಪಡಿಸಿಕೊಂಡಿರುತ್ತಾರೆ, ಸದರಿ ಪಂಚನಾಮೆಯನ್ನು ಸಂಜೆ 04-00 ರಿಂದ 05-00 ಗಂಟೆಯ ವರೆಗೆ ಜರುಗಿಸಲಾಯಿತು, ಎಂದು ಹೇಳುತ್ತಾರೆ, ಅದಕ್ಕೆ ನೀನೇನು ಹೇಳುತ್ತೀ?
ಉಃ ಸುಳ್ಳು.

ಪ್ರಶ್ನೆ 5)ಚಾಸಾ.10/ಪ್ರಾಸಾ.4 ಬಾಪುಗೌಡ ತಂದೆ ಸಿದ್ದನಗೌಡ ಪಾಟೀಲ್, ತಮ್ಮ ಸಾಕ್ಷ್ಯದಲ್ಲಿ ದಿನಾಂಕ 13-03-2026 ರಂದು, ಇವರು 01-10-2014 ರಿಂದ 08-06-2016 ವರೆಗೂ ಸೇಡಂ ಪಿ ಎಸ್ ನಲ್ಲಿ ಪಿ ಎಸ್ ಐ ಎಂದು ಕರ್ತವ್ಯ ನಿರ್ವಹಿಸಿರುತ್ತಾರೆ, ದಿಃ03-04-2015 ರಂದು ಚಾ ಸಾ 9 ರವರಿಂದ ಸದರಿ ಪ್ರಕರಣದ ಕಡತವನ್ನು ಪಡೆದುಕೊಂಡು, ದಿ.03-04-2015 ರಂದು ಆರೋಪಿತರು ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಿಂದ ನಿರೀಕ್ಷಣ ಜಾಮೀನನ್ನು ಪಡೆದುಕೊಂಡು ಬಂದಿರುವುದರಿಂದ ಅವರಿಗೆ ಸೂಕ್ತ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತಾರೆ, ನಂತರ ದಿ.03-05-2015 ರಂದು ಚಾ ಸಾ 1 ರವರ ಗಾಯದ ಪ್ರಮಾಣ ಪತ್ರವನ್ನು ಚಾ ಸಾ 8 ರವರಿಂದ ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತಾರೆ, ಸಾಕ್ಷಿಯು ಸದರಿ ಗಾಯದ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿರುತ್ತಾರೆ, ನಂತರ ಅದೇ ದಿನ ಆರೋಪಿತ ವಿರುದ್ದ ಆರೋಪಿ ಸಾಬೀತು ಆಗಿರುವುದರಿಂದ ಅದೇ ದಿನ ಮಾನ್ಯ ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಿರುತ್ತಾರೆ, ಎಂದು ನುಡಿಯುತ್ತಾರೆ, ಅದಕ್ಕೆ ನೀನೇನು ಹೇಳುತ್ತೀ?
ಉಃ ಸುಳ್ಳು.

ಪ್ರಶ್ನೆ 6) ಚಾಸಾ.7/ಪ್ರಾಸಾ.5 ಶಿವರಾಯ ತಂದೆ ಮಲ್ಲಪ್ಪ, ದಿ.15.04.2025 ರಂದು ತಮ್ಮ ಸಾಕ್ಷ್ಯದಲ್ಲಿ, ಚಾಸಾ-1 ಅವರ ಅಣ್ಣ, ಚಾಸಾ-4 ಅವರ ತಾಯಿ, ಚಾಸಾ-6 ಅವರ ತಂದೆ, ಚಾಸಾ-5 ಅವರಿಗೆ ಗೊತ್ತು, ಆರೋಪಿತರು ಅವರಿಗೆ ಗೊತ್ತು,ಅವರಿಗೂ ಮತ್ತು ಆರೋಪಿತರಿಗೂ ಸುಮಾರು 15 ವರ್ಷಗಳಿಂದ ಹೊಲದಲ್ಲಿ ಪಾಲು ವಿಚಾರದಲ್ಲಿ ಜಗಳವಿರುತ್ತದೆ, ದಿನಾಂಕ 09-03-2016ರಂದು ಬೆಳಗ್ಗೆ ಇವರು ಮತ್ತು ಚಾಸಾ-1, 4 ಮತ್ತು 6ರವರು ಮನೆಯಲ್ಲಿ ಮಾತನಾಡುತ್ತಾ ಇರುವಾಗ ಆರೋಪಿತರೆಲ್ಲರೂ ತಮ್ಮ ಮನೆಯ ಎದುರುಗಡೆ ನಿಂತು ರಂಡಿ ಮಕ್ಕಳೇ, ಬೋಸಡಿ ಮಕ್ಕಳೆ ನಿಮಗೆ ಸೋಕ್ಕು ಬಹಳ ಬಂದಿದ್ದೆ ಎಂದು ಬೈಯುತ್ತಿದ್ದರು, ಆಗ ಇವರು ತಮ್ಮ ಮನೆಯಲ್ಲಿರುವ ಗೊಡೆಯ ಮೇಲೆ ಕಟ್ಟಿಗೆ ಇಟ್ಟಿದ್ದು ಅದಕ್ಕೆ ಆರೋಪಿತರು ಅಲ್ಲಿ ಏಕೆ ಕಟ್ಟಿಗೆ ಇಟ್ಟಿದ್ದಿರಿ ಎಂದು ಹೇಳಿ ಜಗಳ ತಗೆದರು, ಆಗ ಚಾಸಾ-1ರವರು ವಿನಾಕಾರಣ ಏಕೆ ಬೈಯುತ್ತಿದ್ದಿರಾ ತಮ್ಮ ಗೊಡೆಯ ಮೇಲೆ ಇಟ್ಟಿದ್ದೇವು ಎಂದು ಹೇಳಿದಾಗ 2ನೇ ಆರೋಪಿತನು ಅಲ್ಲಿ ಬಿದ್ದಿರುವ ಕಟ್ಟಿಗೆಯನ್ನು ತೆಗೆದುಕೊಂಡು ಚಾಸ-1ರವರ ತಲೆಗೆ ಹೋಡೆದರು, ಆಗ 1ನೇ ಆರೋಪಿತನು ಕಲ್ಲನ್ನು ತೆಗೆದುಕೊಂಡು ಚಾಸಾ-1ರವರ ಬೆನ್ನಿಗೆ ಹೊಡೆದನು, 3ನೇ ಆರೋಪಿತನು ಕೈಯಿಂದ ಚಾಸಾ-1ರವರಿಗೆ ಹೊಡೆಬಡೆ ಮಾಡುತ್ತಿದ್ದನ್ನು, ಅಲ್ಲಿರುವ 4 ಮತ್ತು 5ನೇ ಆರೋಪಿತರು ರಂಡಿ ಮಕ್ಕಳೇ ಇವರದು ಬಹಳ ಆಗಿದೆ ಬಿಡಬಾರದು ಎಂದು ಅವಾಚ್ಯ ಶಬ್ದಗಳಿಂದ ಬೈಯುತ್ತಿದ್ದರು, ಆಗ ಇವರು ಜಗಳ ಬಿಡಿಸಲು ಹೋದಾಗ 3ನೇ ಆರೋಪಿತನು ಅವರಿಗೆ ಹೊಡೆಬಡೆ ಮಾಡಿದನು, ಅದೇ ರೀತಿ 1ನೇ ಆರೋಪಿತನು ಚಾಸಾ-6ರವರಿಗೆ ಕೈಯಿಂದ ಹೊಡೆಬಡೆ ಮಾಡಿದನು, 4 ಮತ್ತು 5ನೇ ಆರೋಪಿತರು ಚಾಸಾ-4ರವರ ಕೂದಲು ಹಿಡಿದು ಎಳೆದಾಡಿ ಹೊಡೆದಿರುತ್ತಾರೆ, ಅಲ್ಲಿ ಅಕ್ಕಪಕ್ಕದಲ್ಲಿರುವ ಚಾಸಾ-5 ಮತ್ತು ಇನ್ನಿತರರು ಬಂದು ಜಗಳ ಬಿಡಿಸಿರುತ್ತಾರೆ, ಇವರು ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತಾರೆ, ಸಾಕ್ಷಿಗೆ ಒಂದು ಬಡಿಗೆ ಮತ್ತು ಕಲ್ಲನ್ನು ತೊರಿಸಲಾಗಿ ಸಾಕ್ಷಿಯೂ ಇದೆ ಬಡಿಗೆ ಮತ್ತು ಕಲ್ಲಿನಿಂದ ಹೊಡೆದಿರುತ್ತಾರೆ ಎಂದು ನುಡಿದಿರುತ್ತಾರೆ, ಎಂದು ಹೇಳುತ್ತಾರೆ, ಅದಕ್ಕೆ ನೀನೇನು ಹೇಳುತ್ತೀ?
ಉಃ ಸುಳ್ಳು.

ಪ್ರಶ್ನೆ 7) ಚಾಸಾ.6/ಪ್ರಾಸಾ.6 ಮಲ್ಲಪ್ಪ ತಂದೆ ಬಸಪ್ಪ, ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ 22-04-2026 ರಂದು, ಚಾಸಾ-1 ಮತ್ತು 7 ಅವರ ಮಗ, ಚಾಸಾ-4 ಅವರ ಹೆಂಡತಿ, ಚಾಸಾ-5 ಗೊತ್ತು, ಆರೋಪಿತರು ಗೊತ್ತು, ಸುಮಾರು 15 ವರ್ಷಗಳ ಹಿಂದೆ ಬೆಳಗ್ಗೆ 6 ಗಂಟೆ ಸುಮಾರಿಗೆ ಚಾಸಾ-1, 4, 7 ಮತ್ತು ಅವರು ಮನೆಯಲ್ಲಿದ್ದಾಗ 3ನೇ ಆರೋಪಿತನು ಬಂದು ಕಟ್ಟೆಯ ಮೇಲೆ ಇಟ್ಟಿದ ಕಟ್ಟಿಗೆ ಒದ್ದು ಅವರ ಜೊತೆಗೆ ಜಗಳ ತೆಗೆದರು, 1 ರಿಂದ 3ನೇ ಆರೋಪಿತರು ಅವರೊಂದಿಗೆ ಜಗಳ ತೆಗೆದು ಅವಾಚ್ಯ ಶಬ್ದಗಳಿಂದ ಬೈಯುವಾಗ ಚಾಸಾ-1ರವರು ಯಾಕೆ ಬೈಯುತ್ತಿದ್ದಿರಾ ಎಂದು ಕೇಳಿದಕ್ಕೆ ಆರೋಪಿತರು ಬಂದು ಬಡಿಗೆಯನ್ನು ತೆಗೆದುಕೊಂಡು ತಲೆಗೆ, ಬೆನ್ನಿಗೆ ಮತ್ತು ಕೈಗಳಿಗೆ ಹೊಡೆದಿರುತ್ತಾರೆ, ಅದೇ ರೀತಿ ಚಾಸಾ-7ರವರಿಗೆ 1 ರಿಂದ 3ನೇ ಆರೋಪಿತರು ಹೊಡೆದಿರುತ್ತಾರೆ, ಆಗ ಇವರಿಗೂ ಸಹ 3ನೇ ಆರೋಪಿತನು ಕಲ್ಲು ತೆಗೆದುಕೊಂಡು ಅವರ ಬೆನ್ನು ಹತ್ತಿ ಅವರಿಗೆ ಹೊಡೆದಿರುತ್ತಾರೆ, ಅದೇ ರೀತಿ ಚಾಸಾ-4ರವರಿಗೆ 4 ಮತ್ತು 5ನೇ ಆರೋಪಿತರು ಕೂದಲು ಹಿಡಿದು ಎಳೆದಾಡಿ ಹೊಡೆದಿರುತ್ತಾರೆ, ಆಗ ಚಾಸಾ-5ರವರು ಬಂದು ಜಗಳ ಬಿಡಿಸಿರುತ್ತಾರೆ, ನಂತರ ಅವರು ಆಸ್ಪತ್ರೆಗೆ ಬಂದು ಆರೋಪಿತರ ವಿರುದ್ಧ ದೂರನ್ನು ಸಲ್ಲಿಸಿರುತಾರೆ, ಅವರು ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತಾರೆ, ಸಾಕ್ಷಿಗೆ ಒಂದು ಕಲ್ಲು ಮತ್ತು ಒಂದು ಬಡಿಗೆ ತೊರಿಸಲಾಗಿ ಸಾಕ್ಷಿಯೂ ಅದೇ ಬಡಿಗೆ ಮತ್ತು ಕಲ್ಲಿನಿಂದ ಹೊಡೆದಿರುತ್ತಾರೆ ಎಂದು ನುಡಿಯುತ್ತಾರೆ, ಎಂದು ಹೇಳುತ್ತಾರೆ, ಅದಕ್ಕೆ ನೀನೇನು ಹೇಳುತ್ತೀ?
ಉಃ ಸುಳ್ಳು.

ಪ್ರಶ್ನೆ 8) ಚಾಸಾ.4/ಪ್ರಾಸಾ.7 ರತ್ನಮ್ಮ ಗಂಡ ಮಲ್ಲಪ್ಪ , ತಮ್ಮ ಸಾಕ್ಷ್ಯದಲ್ಲಿ ದಿ.29.04.2026 ರಂದು, ಚಾಸಾ.1 ಮತ್ತು 7 ಅವರ ಮಗ, ಚಾಸಾ.6 ಅವರ ಗಂಡ , ಚಾಸಾ.5 ಗೊತ್ತು, ಆರೋಪಿತರು ಗೊತ್ತು, ಸುಮಾರು 10 ವರ್ಷಗಳ ಹಿಂದೆ ಬೆಳಿಗ್ಗೆ 06.00 ಗಂಟೆ ಸುಮಾರಿಗೆ ತಮ್ಮ ಮತ್ತು ಆರೋಪಿತರ ನಡುವೆ ಜಗಳ ಆಗಿತ್ತು, ಆಗ ಇವರು ಚಾಸಾ.1, 6 ಮತ್ತು 7 ರವರು ಮನೆಯಲ್ಲಿದರು, ಆಗ ಆರೋಪಿತರು ಬಂದು ಇವರು ನಮ್ಮ ಗೋವೆಯ ಮೇಲೆ ಇಟ್ಟಿದ್ದ ಕಟ್ಟಿಗೆಗಳನ್ನು ಉರುಳಿಸಿದ್ದರು, ಅದಕ್ಕೆ ಚಾಸಾ.1 ರವರು ಪಶ್ನಿಸಿದಾಗ 1 ಮತ್ತು 3 ನೇ ಆರೋಪಿತರು ಕಟ್ಟಿಗೆಯಿಂದ ಚಾಸಾ.1 ರವರು ತಲೆಯ ಮೇಲೆ ಮತ್ತು ಬೆನ್ನಿನ ಮೇಲೆ ಹೊಡೆದರು, ಆಗ ಇವರು ಜಗಳ ಬಿಡಿಸಲು ಹೋದಾಗ 4 ಮತ್ತು 5 ನೇ ಆರೋಪಿತರು ಇವರಿಗೆ ಹೊಡೆ ಬಡೆ ಮಾಡಿರುತ್ತಾರೆ, 1 ರಿಂದ 3ನೇ ಆರೋಪಿತರು ಸೇರಿ ಇವರ ಗಂಡನಾದ ಚಾಸಾ.6 ರವರಿಗೆ ಬೆನ್ನಿಗೆ ಮತ್ತು ಕಾಲಿಗೆ ಹೊಡೆದಿರುತ್ತಾರೆ, ಆಗ ಚಾಸಾ.5 ರವರು ಬಂದು ಜಗಳ ಬಿಡಿಸಿರುತ್ತಾರೆ, ಈ ಬಗ್ಗೆ ಇವರು ಪೋಲೀಸರಿಗೆ ಹೇಳಿಕೆ ನೀಡಿರುತ್ತಾರೆ, ಎಂದು ಹೇಳುತ್ತಾರೆ, ಅದಕ್ಕೆ ನೀನೇನು ಹೇಳುತ್ತೀ?
ಉಃ ಸುಳ್ಳು.

ಪ್ರಶ್ನೆ 9) ಚಾಸಾ.9/ಪ್ರಾಸಾ.8 ಶ್ರೀಮಂತ ತಂದೆ ರೇವಣ ಸಿದ್ದಪ್ಪ, ತಮ್ಮ ಸಾಕ್ಷ್ಯದಲ್ಲಿ ದಿ.18.05.2026 ರಂದು, ಇವರು 2015 ರಿಂದ 2016 ವರೆಗೂ ಸೇಡಂ ಪಿ ಎಸ್ ನಲ್ಲಿ ಮುಖ್ಯ ಪೇದೆ ಎಂದು ಕರ್ತವ್ಯ ನಿರ್ವಹಿಸಿರುತ್ತಾರೆ, ಈ ಅವಧಿಯಲ್ಲಿ ಇವರು ದಿಃ 09-03-2016 ರಂದು ಅವರು ಠಾಣೆಯಲ್ಲಿದ್ದಾಗ ಸುಮಾರು

ಬೆಳಿಗ್ಗೆ 07-30 ಗಂಟೆಗೆ ಇವರು ಠಾಣಾ ಪ್ರಭಾರದಲ್ಲಿದ್ದಾಗ ಸರ್ಕಾರಿ ಆಸ್ಪತ್ರೆಯಿಂದ ಎಂ ಎಲ್ ಸಿ ಬಂದ ಮೇರೆಗೆ ಕೂಡಲೇ ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿ ಚಾಸಾಃ 1 ರವರು ಹೇಳಿಕೆಯನ್ನು ದಾಖಲಿಸಿರುತ್ತಾರೆ, ಸದರಿ ದೂರಿನ ಆಧಾರದ ಮೇಲೆ ತಮ್ಮ ಠಾಣೆಯ ಗುನ್ನೆ ನಂಬರ 53/2016 ನ್ನು ದಾಖಲಿಸಿಕೊಂಡು ಪ್ರ.ವ. ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ಕಳುಹಿಸಿಕೊಟ್ಟರು, ನಂತರ ಅದೇ ದಿನ ಸಾಯಂಕಾಲ 04-00 ರಿಂದ 05-00 ಗಂಟೆಯ ವರೆಗೂ ಚಾಸಾ 5 ರವರು ತೋರಿಸಿದ ಸ್ಥಳದಲ್ಲಿ ಚಾ ಸಾ 2 ಮತ್ತು 3 ರವರ ಸಮಕ್ಷಮ ಘಟನಾ ಸ್ಥಳದ ಪಂಚನಾಮೆಯನ್ನು ಜರುಗಿಸಿರುತ್ತಾರೆ, ಅದೇ ರೀತಿ ಪಂಚನಾಮೆಯ ಕಾಲಕ್ಕೆ ಒಂದು ಬಡಿಗೆ ಮತ್ತು ಒಂದು ಕಲ್ಲನ್ನು ವಶಪಡಿಸಿಕೊಂಡಿರುತ್ತಾರೆ, ಸಾಕ್ಷಿಯು ಸದರಿ ಪಂಚನಾಮೆಯನ್ನು ನೋಡಿ ಗುರುತಿಸಿರುತ್ತಾರೆ, ಅದೇ ರೀತಿ ಒಂದು ಬಡಿಗೆ ಮತ್ತು ಕಲ್ಲುನ್ನು ನೋಡಿ ಗುರುತಿಸಿರುತ್ತಾರೆ, ನಂತರ ಅದೇ ದಿನ ಚಾ ಸಾ 4 ರಿಂದ 7 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ, ನಂತರ ಸದರಿ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಚಾ ಸಾ 10 ರವರಿಗೆ ವಹಿಸಿಕೊಟ್ಟಿರುತ್ತಾರೆ, ಎಂದು ಹೇಳುತ್ತಾರೆ, ಅದಕ್ಕೆ ನೀನೇನು ಹೇಳುತ್ತೀ?

ಉಃ ಸುಳ್ಳು.

ಪ್ರಶ್ನೆ 10) ನೀನು ಇನ್ನೇನಾದರೂ ಹೆಚ್ಚಿಗೆ ಹೇಳುವುದು ಇದೆಯೇ ?

ಉಃ

ಪ್ರಶ್ನೆ 11) ನಿನ್ನ ಪರವಾಗಿ ಯಾವುದಾದರೂ ಸಾಕ್ಷಿಗಳನ್ನು ಮಾಡಿಸುತ್ತೀಯಾ?

ಉಃ

(ಆರೋಪಿಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿ, ಆರೋಪಿತನ ಹೇಳಿಕೆಯನ್ನು ದಾಖಲಿಸಿಕೊಂಡು ಆತನಿಗೆ ಗೊತ್ತಿದ್ದ ಭಾಷೆಯಲ್ಲಿ ಅಭಿಯೋಜಕರ ಪರ ವಿಚಾರಣೆಯಾದ ಸಾಕ್ಷಿಗಳ ಹೇಳಿಕೆಗಳನ್ನು ಓದಿ ಹೇಳಿ ಆತನ ಹೇಳಿಕೆಯನ್ನು ಪಡೆಯಲಾಯಿತು).

ಸಹಿ/-

ದಿನಾಂಕ ಃ 21-05-2026 ಪ್ರ.ದ. ನ್ಯಾ.ದಂ. ಸೇಡಂ.